■ ಹನಿ

# ಕಪಿಲ್ ಟ್ರ್ಯಾಜಿಡಿ ಷೋ

'ಕಪಿಲ್ ಶರ್ಮಾಗೆ ಹುಷಾರಿಲ್ಲ, ಆತ ಯಾವುದೋ ದೊಡ್ಡ ಕಾಯಿಲೆಯಿಂದ ನರಳುತ್ತಿದ್ದಾನೆ ' ಎಂಬ ಸುದ್ದಿ ಹಬ್ಬಿದೆ. ಇದಕ್ಕೆ ಕಾರಣ ಕಳೆದ ವಾರ ಆತ ಆಕಸ್ಮಿಕವಾಗಿ ಆಸ್ಪತ್ರೆ ಸೇರಿದ್ದು. ಸೋನಿ ಟಿವಿ ಯಲ್ಲಿ ಭಾರತದ ಅತ್ಯಂತ ಜನಪ್ರಿಯ ಕಾರ್ಯಕ್ರಮ ಎಂದು ಹೆಸರು ಪಡೆದಿರುವ 'ದಿ ಕಪಿಲ್ ಶರ್ಮಾ ಷೋ' ಶೂಟಿಂಗ್ ಈ ಅನಾರೋಗ್ಯದಿಂದ ಕ್ಯಾನ್ಸಲ್ ಆಗಿದೆ. ಅವತ್ತು ಷೋ ನಲ್ಲಿ ಕಾಣಿಸಿಕೊಳ್ಳಬೇಕಿದ್ದ 'ಮುಬಾರಕನ್' ಚಿತ್ರತಂಡದ ಅರ್ಜುನ್ ಕಪೂರ್, ಅನಿಲ್ ಕಪೂರ್, ಇಲಿಯಾನ ಮುಂತಾದವರು ಶೂಟಿಂಗ್ ಇಲ್ಲದೆ ವಾಪಸಾಗಿದ್ದಾರೆ. ಮನೆಯಿಂದ ನೇರ ಆಸ್ಪತ್ರೆಗೆ ತೆರಳಿದ ಕಪಿಲ್ ಗೆ ವೈದ್ಯರು ಚಿಕಿತ್ಸೆ ನೀಡಿ ನಾಲ್ಕು ದಿನ ವಿಶ್ರಾಂತಿ ಪಡೆಯಲು ಅಲ್ಲೇ ಮಲಗಿಸಿದ್ದಾರೆ. ಬೇರೆ ಸಂದರ್ಭದಲ್ಲಾಗಿದ್ದರೆ ಇದೊಂದು ಮಾಮೂಲಿ ಬಿಪಿ ಕೇಸ್. ಆದರೆ ಕಪಿಲ್ ಶರ್ಮಾ ಭಾರತದ ಅತ್ಯಂತ ಬ್ಯುಸಿ ಷೋಮ್ಯಾನ್. ಕಳೆದ ಎರಡು ತಿಂಗಳಲ್ಲಿ ಆತ ಇದೀಗ ಮೂರನೇ ಬಾರಿ ಹೀಗೆ ಹುಷಾರು ತಪ್ಪಿ ಆಸ್ಪತ್ರೆ ಸೇರಿದ್ದಾನೆ. ಏನೋ ದೊಡ್ಡ ಪ್ರಾಬ್ಲಮ್ಮೇ ಇರಬೇಕು ಕಣ್ರೀ.. ಎಂದು ಅವನಿಗೆ ಆಗದವರು, ಆಗುವವರು ಎಲ್ಲರೂ ಆಡಿಕೊಳ್ಳುತ್ತಿದ್ದಾರೆ! ದೊಡ್ಡ ಮನುಷ್ಯರಿಗೇ ಬೀಪಿ, ಶುಗರ್ ಬರೋದು, ಇದೇನ್ ಮಹಾ.. ಎಂದು ಉಡಾಫೆ ಮಾಡುವಂತಿಲ್ಲ. ಏಕೆಂದರೆ ದೊಡ್ಡ ಮನುಷ್ಯರಿಗೇ ತಾಪತ್ರಯಗಳು ಜಾಸ್ತಿ. ಕಪಿಲ್ ಬಳಿ ಇವತ್ತು ಹೇರಳ ದುಡ್ಡಿದೆ, ಬೇಜಾನ್ ಆಸ್ತಿ ಇದೆ, ಲಕ್ಷಾಂತರ ಅಭಿಮಾನಿಗಳಿದ್ದಾರೆ. ಆದರೆ ಏನೆಲ್ಲ ಇದ್ದರೂ ಆರೋಗ್ಯ ಸರಿ ಇಲ್ಲ ಎಂದಾದಲ್ಲಿ ಷೋ ಫ್ಲಾಪ್ ಆಗುವುದಕ್ಕೆ ಹೆಚ್ಚು ಸಮಯ ಹಿಡಿಯುವುದಿಲ್ಲ. ಏನೇ ಆದರೂ ಪ್ರತಿ ವಾರದ ಅಂತ್ಯಕ್ಕೆ ಟಿವಿ ಎದುರಿಗೆ ಕುಳಿತ ಜನ ಬಿದ್ದು ಬಿದ್ದು ನಗುವಂತೆ ಕಪಿಲ್ ತನ್ನ ಷೋ ನಡೆಸಲೇಬೇಕು. ಏಕೆಂದರೆ ಜನರಿಗೆ ಹಾಗೆ ನಕ್ಕು ಅಭ್ಯಾಸವಾಗಿದೆ. ಅವರು ನಕ್ಕಷ್ಟೂ ಟಿಆರ್ ಪಿ ಏರುತ್ತದೆ. ಟಿಆರ್ ಪಿ ಏರಿದಷ್ಟೂ ಟಿವಿ ಚಾನೆಲ್ ಗೆ ದುಡ್ಡು ಬರುತ್ತದೆ. ಒಮ್ಮೆ ಟಿಆರ್ ಪಿ ನೆಲ ಕಚ್ಚಿತೋ, ಆಮೇಲೆ ಕಪಿಲ್ ಮನೆಯಲ್ಲಿ ಕುಳಿತು ಒಬ್ಬನೇ ನಗಬೇಕಾಗುತ್ತದೆ. ಹಾಗಾಗಿ ಕಪಿಲ್ ಹಗಲೂ ರಾತ್ರಿ ಬ್ಯುಸಿ. ಜನರನ್ನು ನಗಿಸುವುದು ಅಷ್ಟು ಸುಲಭವಿಲ್ಲ. ಅದಕ್ಕಾಗಿ ಹೊಸ ಜೋಕ್ ಗಳನ್ನು ಹುಡುಕಿ ಹೈರಾಣಾಗಿ ಬದುಕಿನಲ್ಲಿ ತಾವೇ ಸ್ವತಃ ಜೋಕರ್ ಗಳಾದವರು ಎಷ್ಟೋ ಮಂದಿ ಆಗಿ ಹೋಗಿದ್ದಾರೆ. ಕಪಿಲ್ ಸದ್ಯಕ್ಕೆ ಫೋರ್ಬ್ಸ್ ಪಟ್ಟಿಯ ಪ್ರಕಾರ, ಭಾರತದ 7ನೇ ಅತ್ಯಂತ ಜನಪ್ರಿಯ ಸೆಲೆಬ್ರಿಟಿ ಹಾಗೂ 11ನೇ ಅತ್ಯಧಿಕ ಆದಾಯ ಪಡೆಯುವ ಸೆಲೆಬ್ರಿಟಿ! ಕಳೆದ ವರ್ಷ ಈ ಪಟ್ಟಿಯಲ್ಲಿ ಆತ 27ನೇ ಸ್ಥಾನದಲ್ಲಿದ್ದ. ಅದಕ್ಕೂ ಮುಂಚೆ 2012 ರಲ್ಲಿ ಜನಪ್ರಿಯತೆಯಲ್ಲಿ 69ನೇ ಸ್ಥಾನದಲ್ಲಿದ್ದ.



ಈ ಐದು ವರ್ಷಗಳಲ್ಲಿ ಟಿವಿ ಹಾಸ್ಯಲೋಕದಲ್ಲಿ ಆತನ ಸ್ಥಾನ ಹೀಗೆ ಮೇಲೇರಲು 'ದಿ ಕಪಿಲ್ ಶರ್ಮಾ ಷೋ' ಮುಖ್ಯ ಕಾರಣ. ಆದರೆ ಈ ಷೋ ಕಳೆ ನಾಲ್ಕು ತಿಂಗಳಲ್ಲಿ ಎರಡು ಸಲ ಟಾಪ್ ಟೆನ್ ಕಾರ್ಯಕ್ರಮಗಳ ಪಟ್ಟಿಯಿಂದ ಕೆಳಗಿಳಿದು ಕಪಿಲ್ ನ ಜನಪ್ರಿಯತೆಗೆ ದೊಡ್ಡ ಹೊಡೆತ ನೀಡಿದೆ. –ಹೀಗೆ ಆಗಲು ಕಾರಣ ಸ್ವತಃ ಕಪಿಲ್– ಎನ್ನುವವರಿದ್ದಾರೆ. ಹಣ ಮತ್ತು ಜನಪ್ರಿಯತೆಯ ಅಮಲು ತಲೆಗೆ ಹತ್ತಿದ್ದರಿಂದಲೇ ಕಪಿಲ್ ತನ್ನ ಷೋ ಸಹೋದ್ಯೋಗಿಗಳ ಜತೆಗೆ ಜಗಳವಾಡಿಕೊಂಡು ಅವನತಿಯ ಹಾದಿ ಹಿಡಿದಿದ್ದಾನೆ ಎನ್ನುವುದು ಆತನ ಗೆಳೆಯರ ಅನಿಸಿಕೆ.ಕಪಿಲ್ ನ ಯಶಸ್ವಿ ಷೋ ನಲ್ಲಿ ಪ್ರಮುಖ ಪಾತ್ರ ವಹಿಸುವ ಇನ್ನೂ ಮೂವರಿದ್ದಾರೆ. ಅವರೆಲ್ಲ ಕಳೆದ ನಾಲ್ಕು ತಿಂಗಳಿಂದ ಕಪಿಲ್ ನಿಂದ ದೂರ ಸರಿದಿದ್ದಾರೆ. ಆತನ ಷೋ ಇದರಿಂದ ಬಡಕಲಾಗಿದೆ. ಟಿಆರ್ ಪಿ ಕುಸಿಯಲು ಅದೇ ಕಾರಣ ಎನ್ನಲಾಗುತ್ತಿದೆ.ಕಪಿಲ್ ಷೋ ನಲ್ಲಿ ಬರುವ ಡಾಕ್ಟರ್ ಮಶ್ಹೂರ್ ಗುಲಾಟಿ ಪಾತ್ರಧಾರಿ ಸುನಿಲ್ ಗ್ರೋವರ್ ಭಾರತದಲ್ಲಿ ಕಪಿಲ್ ನಷ್ಟೇ ಖ್ಯಾತಿ ಹೊಂದಿದ ಹಾಸ್ಯ ನಟ. ಕಪಿಲ್ ಷೋ ಆರಂಭಿಸಿದ ಹತ್ತು ಹದಿನೈದು ನಿಮಿಷಗಳಲ್ಲಿ ಈ ಡಾಕ್ಟರ್ ಬರದಿದ್ದರೆ ಟಿವಿ ಮುಂದೆ ಕುಳಿತ ಅಭಿಮಾನಿಗಳು ಚಡಪಡಿಸ ತೊಡಗುತ್ತಾರೆ. ಇನ್ನೊಬ್ಬಾತ ಹೆಣ್ಣಿನ ಪಾತ್ರಧಾರಿ ಅಲಿ ಅಸ್ಗರ್ ಬೆಳ್ಳಗೆ ಮುದ್ದು ಮುದ್ದಾಗಿರುವ ಈತ ಕಾರ್ಯಕ್ರಮದಲ್ಲಿ ಕಪಿಲ್ ನ ಚಿಕ್ಕಮ್ಮನ ಪಾತ್ರಧಾರಿ. ಈತನ ನಿಜ ನಾಮಧೇಯ ಗೊತ್ತಿಲ್ಲದವರು ಈತನನ್ನು ಹೆಣ್ಣು ಎಂದೇ ಭಾವಿಸುವ ಎಲ್ಲ ಸಾಧ್ಯತೆಗಳಿವೆ. ಮೂರನೆಯಾತ ವೇದಿಕೆ ಮೇಲೆ ಆಳಿನ ಪಾತ್ರದಲ್ಲಿ ಬರುವ ಚಂದನ್ ಪ್ರಭಾಕರ್. ವಾಸ್ತವವಾಗಿ ಈತ ಕಪಿಲ್ ನ ಬಾಲ್ಯದ ಗೆಳೆಯ. ಈ ಮೂವರೂ ಕಪಿಲ್ ಷೋಗೆ ಆಧಾರಸ್ತಂಭಗಳಿದ್ದಂತೆ. ಈ ಮೂವರು ಏಕಾಏಕಿ ಕಾರ್ಯಕ್ರಮ ಬಿಟ್ಟು ಹೋದದ್ದು ಕಪಿಲ್ ಬೀಪಿ ಏರಿಳಿತಕ್ಕೆ ಮುಖ್ಯ ಕಾರಣ ಎನ್ನುವುದು ಖಂಡಿತ. ಇವರಲ್ಲಿ ಚಂದನ್ ಜುಲೈ ಮೊದಲ ವಾರದಿಂದ ಕಾರ್ಯಕ್ರಮಕ್ಕೆ ಮರಳಿದ್ದಾನೆ. ಆದರೆ ಉಳಿದಿಬ್ಬರು ಪ್ರತ್ಯೇಕವಾಗಿದ್ದಾರೆ.ಅಲಿ ಅಸ್ಗರ್ ಇನ್ನೊಂದು ಚಾನೆಲ್ ನಲ್ಲಿ 'ದಿ ಡ್ರಾಮಾ ಕಂಪೆನಿ' ಎಂಬ ಹೊಸ ಕಾಮೆಡಿ ಷೋ ಆರಂಭಿಸಿದ್ದಾನೆ. ಅದರಲ್ಲಿ ಕಪಿಲ್ ನ ವೃತ್ತಿಪರ ವೈರಿ, ಇನ್ನೊಬ್ಬ ಖ್ಯಾತ ಹಾಸ್ಯನಟ ಕೃಷ್ಣ ಅಭಿಷೇಕ್ ಜತೆಗೂಡಿದ್ದಾನೆ. ಈ ಷೋ ಈಗ ಟಿಆರ್ ಪಿ ರೇಟಿಂಗ್ ನಲ್ಲಿ ಕಪಿಲ್ ಷೋಗೆ ಸೆಡ್ಡು ಹೊಡೆಯುತ್ತಿರುವುದು ಕಪಿಲ್ ನಿದ್ದೆಗೆಡಿಸಿದೆ. ಈ ಗೆಳೆಯರ ನಡುವೆ ಒಡಕು ಉಂಟಾಗಲು ಕಾರಣವೂ ಬಹಳ ತಮಾಷೆಯಾಗಿದೆ. ಇವರ ತಂಡ ಆಸ್ಟ್ರೇಲಿಯಾದಲ್ಲಿ ಹಾಸ್ಯ ಕಾರ್ಯಕ್ರಮ ನೀಡಿ ವಾಪಸಾಗುವಾಗ ವಿಮಾನದಲ್ಲಿ ಜಗಳವಾಯಿತು. ತನ್ನನ್ನು ಬಿಟ್ಟು ಉಳಿದವರು ಮೊದಲು ಊಟ ಶುರು ಮಾಡಿದರು ಎಂಬ ಕಾರಣಕ್ಕೆ ಸಿಟ್ಟಿಗೆದ್ದ ಕಪಿಲ್ ಚಂದನ್ ಮತ್ತಿತರರ ಜತೆ ಜಗಳ ಶುರು ಮಾಡಿ ಬೈಯತೊಡಗಿದ. ಜಗಳ ಬಿಡಿಸಲು ಯತ್ನಿಸಿದ ಸುನಿಲ್ ಗ್ರೋವರ್ ಗೆ ಚಪ್ಪಲಿ ತೋರಿಸಿ ಕೂಗಾಡಿದ! ಅಷ್ಟೆ, ಕಾಮಿಡಿ ಷೋ ಒಂದೇ ಘಟನೆಯಲ್ಲಿ ಟ್ರಾಜಿಡಿ ಷೋ ಆಯಿತು.

ಸುನಿಲ್ ಗ್ರೋವರ್ ಮನೆಗೇ ಹೋಗಿ ಕಪಿಲ್ ಕ್ಷಮೆ ಕೇಳಿದ್ದಾನೆ. ಅದನ್ನು ಟ್ವಿಟರ್ ನಲ್ಲೂ ಬಹಿರಂಗ ಮಾಡಿದ್ದಾನೆ. ಆದರೆ ಗ್ರೋವರ್ ಮತ್ತೆ ಷೋ ಕಡೆ ತಲೆ ಹಾಕಿಲ್ಲ. ಈ ಕಾಮಿಡಿ ಗೆಳೆಯರ ಟ್ರ್ಯಾಜಿಡಿ ಷೋ ಮುಂದೆ ಯಾವ ದಾರಿ ಹಿಡಿಯುತ್ತೋ ನೋಡಬೇಕು. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65